## ಸುದ್ದಿ ಸಂಕ್ಷೇಪ

# ಕೇನಿಗ್ ತರಬೇತಿ ಕೇಂದ್ರ ವಿಸ್ತರಣೆ

ಬೆಂಗಳೂರು: ಐಟಿ ತರಬೇತಿ ನೀಡುವ ಕೇನಿಗ್ ಸಂಸ್ಥೆ ಆಫ್ರಿಕಾ ಮತ್ತು ಭಾರತದ ಕೆಲವು ಭಾಗಗಳಲ್ಲಿ ತನ್ನ ತರಬೇತಿ ಕೇಂದ್ರಗಳನ್ನು ವಿಸ್ತರಿಸಲು 20 ಲಕ್ಷ ಅಮೆರಿಕನ್ ಡಾಲರ್ ಹೂಡಲು ಮುಂದಾಗಿದೆ. ದೆಹಲಿ ಮೂಲದ ಈ ಕಂಪನಿ ಪಶ್ಚಿಮ, ದಕ್ಷಿಣ ಮತ್ತು ಪೂರ್ವ ಆಫ್ರಿಕಾದಲ್ಲಿ ಕೇಂದ್ರಗಳನ್ನು ಸ್ಥಾಪಿಸುವ ಯೋಜನೆ ಹೊಂದಿದೆ. ಭಾರತದಲ್ಲಿ ದೆಹಲಿ, ಗೋವಾ, ಶಿಮ್ಲಾ, ಡೆಹ್ರಾಡೂನ್, ದುಬೈ ಹಾಗೂ ಬೆಂಗಳೂರಿನಲ್ಲಿ ಕೇಂದ್ರಗಳನ್ನು ಹೊಂದಿದೆ. 2013-14ರ ವಿತ್ತೀಯ ವರ್ಷದಲ್ಲಿ ಆಫ್ರಿಕಾ ಸರ್ಕಾರ ಕಂಪನಿಗೆ 70 ಲಕ್ಷ ಡಾಲರ್ ಆರ್ಡರ್ ನೀಡಿದೆ ಎಂದು ಕೇನಿಗ್‌ನ ಸಹ ಸಂಸ್ಥಾಪಕ ರೋಹಿತ್ ಅಗರ್‌ವಾಲ್ ತಿಳಿಸಿದ್ದಾರೆ.